20. ಅಪಘಾತ ಪ್ರಕರಣಗಳಲ್ಲಿ ಭಾಗಿಯಾದ ನೌಕರರಿಗೆ ಕಾನೂನು ಸಲಹಾ ಭತ್ಯೆ.

21. ಹೃದಯ, ಕ್ಯಾನ್ಸರ್, ಮೂತ್ರಪಿಂಡ ವೈಫಲ್ಯ, ಸ್ಪೈನಲ್ ಕಾರ್ಡ, ಮೆದುಳು ಹಾಗೂ ಇನ್ನಿತರ ತೀವ್ರತರವಾದ ಖಾಯಿಲೆಗಳಿಂದ ಬಳಲುತ್ತಿರುವ ನೌಕರರಿಗೆ / ಅವಲಂಬಿತರಿಗೆ ವೈದ್ಯರ ಸಲಹೆ ಮೇರೆಗೆ ಶಸ್ತ್ರಚಿಕಿತ್ಸೆಗಾಗಿ ಗರಿಷ್ಠ ಮೊತ್ತದ ವೈದ್ಯಕೀಯ ಮುಂಗಡ ಪಾವತಿಸಲಾಗುತ್ತಿದೆ.

22. ನೌಕರರು ಹಾಗೂ ಅವರ ಅವಲಂಬಿತರು ಸಾಮಾನ್ಯ ಖಾಯಿಲೆಗಳಿಂದಾಗಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ `5000/– ಗಳ ಮುಂಗಡ ಪಾವತಿಸಲಾಗುತ್ತಿದೆ.

23. ಮದ್ಯವ್ಯಸನಿ ನೌಕರರನ್ನು ಗುರುತಿಸಿ ಅವರುಗಳ ಆರೋಗ್ಯದ ಹಿತದೃಷ್ಟಿಯಿಂದ ಡಿ–ಅಡಿಕ್ಷನ್ ಚಿಕಿತ್ಸಾ ಸೌಲಭ್ಯ ಕಲ್ಪಿಸಲಾಗಿದೆ.

24. ಅನಾರೋಗ್ಯದಿಂದಾಗಿ ಮೂಲ ಹುದ್ದೆಯ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥರಾದ ನೌಕರರಿಗೆ ಅನುಕೂಲವಾಗುವಂತೆ ಸ್ವಯಂ ನಿವೃತ್ತಿ ಯೋಜನೆ ಮತ್ತು ಕಲ್ಯಾಣನಿಧಿಯನ್ನು ಸ್ಥಾಪಿಸಲಾಗಿದ್ದು, ಈ ಯೋಜನೆಯಡಿ ನಿವೃತ್ತಿ ಪಡೆದುಕೊಳ್ಳುವ ನೌಕರರಿಗೆ, ಅವರಿಗೆ ನೀಡಲಾಗುವ ಭವಿಷ್ಯನಿಧಿ, ಉಪದಾನ, ರಜೆ ನಗದೀಕರಣದ ಜೊತೆಗೆ ಕನಿಷ್ಠ ` 2.00 ಲಕ್ಷದಿಂದ ಗರಿಷ್ಠ ` 6.00 ಲಕ್ಷದವರೆಗೆ ಹೆಚ್ಚುವರಿ ಆರ್ಥಿಕ ಸೌಲಭ್ಯ ಕಲ್ಪಿಸಲಾಗಿದೆ.

25. ನಿವೃತ್ತಿಯಾದ ಸಂದರ್ಭಗಳಲ್ಲಿ ಉಪಧನ, ಭವಿಷ್ಯ, ನಿಧಿ, ಮರಣ–ವ–ನಿವೃತ್ತಿ ಪರಿಹಾರ ನಿಧಿ, ಗಳಿಕೆ ರಜೆ ನಗದೀಕರಣ ಸೌಲಭ್ಯಗಳು.

26. ನಿಧನರಾದ ನೌಕರರ ಅವಲಂಬಿತರಿಗೆ ಮೇಲಿನ ಸೌಲಭ್ಯಗಳ ಜೊತೆಗೆ `3.00 ಲಕ್ಷಗಳ ಇಲಾಖಾ ಗುಂಪು ವಿಮಾ ಯೋಜನೆ, `1.00 ಲಕ್ಷದ

ಅಪಘಾತ ವಿಮಾ ಯೋಜನೆ ಮತ್ತು ಎಂಪ್ಲಾಯಿಸ್ ಡೆತ್ ಲಿಂಕ್ ವಿಮಾ ಯೋಜನೆ.

27. ಸೇವಾ ಅವಧಿಯಲ್ಲಿ ನಿಧನರಾಗುವ ನೌಕರರ ಅವಲಂಬಿತರಲ್ಲಿ ಅರ್ಹ ವಿದ್ಯಾರ್ಹತೆ ಹೊಂದಿರುವ ಒಬ್ಬರಿಗೆ ಜಾರಿಯಲ್ಲಿರುವ ಸಂಸ್ಥೆಯ ನಿಯಮಾವಳಿನ್ವಯ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲಾಗುತ್ತಿದೆ.

28. ಸೇವಾವಧಿಯಲ್ಲಿ ನಿಧನರಾಗುವ ನೌಕರರ ಅಂತ್ಯ ಸಂಸ್ಕಾರಕ್ಕಾಗಿ `5000/–ಗಳ ಎಕ್ಸ್‌ಗ್ರೇಷಿಯಾ ಪಾವತಿ ಮತ್ತು ವಿಆರ್‌ಎಸ್ & ಡಬ್ಲ್ಯು ಎಫ್ ನಿಧಿಯಿಂದ ಹೆಚ್ಚುವರಿಯಾಗಿ `3000/–ಗಳನ್ನು ಪಾವತಿಸ ಲಾಗುತ್ತಿದೆ.

29. ನೌಕರರ ವೈದ್ಯಕೀಯ ಚಿಕಿತ್ಸಾ ಅನುಕೂಲಕ್ಕಾಗಿ ಉತ್ತಮ ಸೌಕರ್ಯವುಳ್ಳ ಖಾಸಗಿ ಹಾಗೂ ಸರ್ಕಾರದ ಸ್ವಾಯತ್ತ ಆಸ್ಪತ್ರೆಗಳ ಜೊತೆಗೆ ವೈದ್ಯಕೀಯ ಒಡಂಬಡಿಕೆ ಮಾಡಿಕೊಂಡು ಸಿಜಿಹೆಚ್‌ಎಸ್ ದರಪಟ್ಟಿಯಡಿ ಕ್ಯಾಸ್‌ಲೆಷ್ ಸೌಲಭ್ಯ ಕಲ್ಪಿಸಲಾಗಿದೆ.

30. ನಿವೃತ್ತ ನೌಕರರಿಗೆ ಅವರ ಜೀವಿತಾವಧಿವರೆಗೆ ಉಚಿತ ಬಸ್ ಪಾಸ್ ಸೌಲಭ್ಯ.

ಸರ್ಕಾರಿ ಆಸ್ಪತ್ರೆಗಳಲ್ಲಿ ಐ.ಸಿ.ಯು. ವ್ಯವಸ್ಥೆ:

786 (1447); ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)

(ಅ) ಬೆಂಗಳೂರು ಮಹಾನಗರ ಸೇರಿದಂತೆ ರಾಜ್ಯದ ಜಿಲ್ಲಾ ಆಸ್ಪತ್ರೆಗಳಲ್ಲಿ ಒದಗಿಸಿರುವ ಐ.ಸಿ.ಯು. ಘಟಕಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದೆಯೇ;

(ಆ) ಐ.ಸಿ.ಯು.ಗಳ ಬೇಡಿಕೆ ಮತ್ತು ಪ್ರಸ್ತುತ ಇರುವ ಕೊರತೆ ಎಷ್ಟು.

(ಇ) ಐ.ಸಿ.ಯು. ವ್ಯವಸ್ಥೆಯನ್ನು ಸಮರ್ಪಕವಾಗಿ ಬಲಪಡಿಸಲು ಮತ್ತು ನಿರ್ವಹಿಸಲು ಸರ್ಕಾರದ ಕ್ರಿಯಾ ಯೋಜನೆಗಳೇನು?